

ಗುರುರಾಜ ಆಮೂರರು ಇತ್ತೀಚೆಗೆ ತಮ್ಮ ಲೋಕಯಾತ್ರೆಯನ್ನು ಮುಗಿಸಿದರು. 'ಲೋಕಯಾತ್ರೆ' ಪದವನ್ನು ಅವರ ಬಾಯಿಂದ ಮೊದಲು ಕೇಳಿಸಿಕೊಂಡಿದ್ದು 2011ರ ಸುಮಾರಿನಲ್ಲಿ – ಅವರ ಮನೆಯಲ್ಲೇ ಎರಡು ದಿನ ತಂಗಿದ್ದಾಗ. ಅವರಾಗ ಗೋರಖಪುರದ ಗೀತಾ ಪ್ರೆಸ್‌ನ ಸಂಸ್ಕೃತ ಮಹಾಭಾರತ ಸಂಪುಟಗಳನ್ನು ಓದುತ್ತಿದ್ದರು. ಮಹಾಭಾರತದಲ್ಲಿ ಅನುಷಂಗಿಕವಾಗಿ ಬರುವ ಅಸಂಖ್ಯ ಸಂವಾದಗಳ ಆಕೃತಿ, ಕಾರ್ಯ ಹಾಗೂ ಅವುಗಳಲ್ಲಿ ಅಡಕವಾಗಿರುವ ಜ್ಞಾನದ ಸ್ವರೂಪದ ಕುರಿತು ಅವರು ಯೋಚಿಸುತ್ತಿದ್ದರು. ಲೌಕಿಕ ಕಾವ್ಯವಾದ ಮಹಾಭಾರತ ಈ ಸಂವಾದಗಳ ಮೂಲಕ ಮಾನವನ ಕಠಿಣವಾದ 'ಲೋಕಯಾತ್ರೆ'ಯ ಕುರಿತು ಸಮಗ್ರವಾಗಿ ಹಲವು ನೆಲೆಗಳಲ್ಲಿ ಚಿಂತಿಸಿ ಮಾರ್ಗದರ್ಶನ ನೀಡುವ ಉದ್ದೇಶವನ್ನು ಹೊಂದಿದೆ ಎಂದು ಅವರು ಊಹಿಸಿದ್ದರು. ಇದೇ ರೀತಿ ಉಪನಿಷತ್ತುಗಳು, ಗೀತೆ, ಯೋಗವಾಶಿಷ್ಠದಂತಹ 'ಸಂಸ್ಕೃತಿಯ ಆಕರ ಪಠ್ಯ'ಗಳನ್ನು ಮೂಲದಲ್ಲೇ ಓದುವ ಇರಾದೆಯನ್ನು ವ್ಯಕ್ತಪಡಿಸಿದ್ದರು. 'ಅವುಗಳ ರಿವೈವಲ್‌ಗಾಗಿ ಅಲ್ಲ; ತಿಳಿವಳಿಕೆಗಾಗಿ, ಪ್ರತ್ಯಭಿಜ್ಞಾನಕ್ಕಾಗಿ' ಎಂದು ಸೇರಿಸಿದರು. 'ಸಾಹಿತ್ಯ ವಿಮರ್ಶೆ?' ಎಂದಾಗ 'ವಿಮರ್ಶೆ ಬರೆಯುವುದನ್ನು ನಿಲ್ಲಿಸಬೇಕೆಂದಿದ್ದೇನೆ' ಎಂದರು. ಇತ್ತೀಚಿನ ಬರಹಗಾರರ ಆಸ್ಥೆಗಳೇನು ಎಂದು ತಿಳಿಯುವಷ್ಟು ವ್ಯಾಪಕ ಹಾಗೂ ಸತತ ಓದು ಸಾಧ್ಯವಾಗುತ್ತಿಲ್ಲವೆಂದರು. ಈ ಮುಂದಿನ ವರ್ಷಗಳಲ್ಲಿ ಅವರು ತಾವು ಓದಬೇಕೆಂದು ಬಯಸಿದ್ದ ಪುಸ್ತಕಗಳೆಲ್ಲವನ್ನೂ ಅವುಗಳ ವ್ಯಾಖ್ಯಾನ ಪರಂಪರೆಯ ಸಮೇತ ಓದಿ ಮುಗಿಸಿದರು; ಸಾಂಕೇತಿಕ ರೂಪದ ಬರವಣಿಗೆಯನ್ನೂ ಮಾಡಿದರು. ಈ ಓದಿನಿಂದ ಅವರ ನೆನಪಿನಲ್ಲಿ ಸದಾ ಹಸಿರಾಗಿದ್ದ ಬೇಂದ್ರೆ ಕಾವ್ಯದ ಕುರಿತು ಹೊಸ ಒಳನೋಟಗಳು ದೊರೆತು ಬೇಂದ್ರೆಯಲ್ಲಿ ಕಾವ್ಯ ಹಾಗೂ ತತ್ತ್ವಜ್ಞಾನಗಳ ಸಂಬಂಧವನ್ನು ಚರ್ಚಿಸುವ ಕೃತಿಯನ್ನೂ ರಚಿಸಿದರು.

ಅವರು ತೊಂಬತ್ತರ ಹೊಸ್ತಿನಲ್ಲಿದ್ದಾಗ ಇನ್ನೊಮ್ಮೆ ಅವರೊಂದಿಗೆ ನಾಲ್ಕಾರು ದಿನ ಉಳಿದುಕೊಂಡಿದ್ದೆ. 'ಲೋಕಯಾತ್ರೆ' ಪ್ರಕಟವಾಗಿ ಅದು ಬೆಸ್ಟ್‌ಸೆಲ್ಲರ್ ಪಟ್ಟಿಯಲ್ಲಿ ಕೆಲವು ವಾರಗಳಿಂದ ಕಾಣಿಸಿಕೊಳ್ಳುತ್ತಿತ್ತು. ಆದರೆ, ಆರು ದಶಕಗಳ ಜೀವನ ಸಂಗಾತಿ ಶಾಂತಾರ ಅಗಲಿಕೆಯಿಂದ ಗುರುರಾಜರು ತುಂಬ ಖಿನ್ನರಾಗಿದ್ದರು. ಸ್ವಗತದಂತೆ ಇಳಿದನಿಯಲ್ಲಿ ಮಾತಾಡಿದ್ದೆಲ್ಲ ಅವರದೇ ಲೋಕಯಾತ್ರೆಯ ಕುರಿತು – ಅದು ಪಡೆದುಕೊಂಡ ಆಕಸ್ಮಿಕ ತಿರುವುಗಳು ಹಾಗೂ ದೊರಕಿಸಿಕೊಂಡ ಸಹಾಯ ಸೌಭಾಗ್ಯದ ಕುರಿತು. ಮದುವೆಯಾದ ಹೊಸತರಲ್ಲಿ ಕುಮಟೆಯಲ್ಲಿ ಸಂಸಾರ ಹೂಡಿದ 'ಅರಣ್ಯವಾಸ'ದ ದಿನಗಳನ್ನು (1950–58) ನೆನಪಿಸಿಕೊಂಡಾಗ ಮಾತ್ರವೇ ಕೊಂಚ ಗೆಲುವಾಗಿ ದನಿ ಉಲ್ಲಸಿತವಾಗಿತ್ತು. 'ಲೋಕಯಾತ್ರೆಯ ಕೊನೆಯ ಘಟ್ಟದಲ್ಲಿ ಏಕಾಂಗಿಯಾಗಿರುತ್ತೇನೆಂದುಕೊಂಡಿರಲಿಲ್ಲ' ಎಂದಾಗ ಸ್ವರ್ಗಾರೋಹಣದ ಧರ್ಮರಾಜನ ನೆನಪಾಗಿ ಅಸ್ವಸ್ಥಗೊಂಡೆ. ಬೀಳ್ಕೊಡುವ ದಿನ ತಮ್ಮ ಯಾತ್ರೆಯಲ್ಲಿ ಜೊತೆಯಾದವರನ್ನೆಲ್ಲ ನೆನಪಿನ ಲೋಕದಿಂದ ಅಕ್ಷರ ಲೋಕಕ್ಕೆ ಆವಾಹಿಸಿ ಋಣ ಸಂದಾಯಿಸುವ ಯೋಜನೆಯನ್ನು ಹಂಚಿಕೊಂಡರು. ಇಡೀ ಯಾತ್ರೆಯನ್ನು ಪುನರನುಭವಿಸುವುದು ಅವರಿಗೆ ಇಷ್ಟವಿರಲಿಲ್ಲ; ಅದನ್ನೊಂದು ಸುಸಂಬದ್ಧ ಕತೆಯಾಗಿಸುವುದರಲ್ಲೂ ಅವರಿಗೆ ವಿಶ್ವಾಸವಿರಲಿಲ್ಲ. ಹೀಗಾಗಿ ಲೋಕಯಾತ್ರೆಯಲ್ಲಿ ನೆರವಾದವರಿಗೆಲ್ಲ –ತಮ್ಮನ್ನು ರೂಪಿಸಿದ ಶಿಲ್ಪಿಗಳಿಗೆಲ್ಲ – ಕೃತಜ್ಞತೆ ಹೇಳಿ ಹಗುರಾಗುವ 'ನೀರ ಮೇಲಣ ಗುಳ್ಳೆ' ಬರೆದರು. ನೀರ ಮೇಲಣ ಗುಳ್ಳೆ ಸ್ಥಿರವಲ್ಲ ನಿಜ; ಆದರೆ ಅದು ಸುಂದರವೂ ಹೌದು ನಿಜವೂ ಹೌದು. ಹೀಗಾಗಿ ಅದು ಅಸ್ಥಿರವಾದ ಸೃಷ್ಟಿಯ ಸುಂದರವಾದ ಪ್ರತಿಮೆ ಎಂದಿದ್ದರು.

ಆಮೇಲಿನದು ಪಾಥೇಯದ ವಿಸರ್ಜನೆಯ ಕಾರ್ಯವಾಗಿತ್ತು ಎಂದು ಈಗ ಅನಿಸುತ್ತಿದೆ. ಅವರ ಸರ್ವಸ್ವವೇ ಆಗಿದ್ದ, ಇಷ್ಟಪಟ್ಟು ಕೊಂಡುಕೊಂಡಿದ್ದ ಅಪರೂಪದ ಪುಸ್ತಕಗಳ ಹಾಗೂ ಹಿರಿಯ ಮತ್ತು ಓರಿಗೆಯ ಲೇಖಕರ ಹಸ್ತಾಕ್ಷರ ಸಹಿತವಾದ ಕೃತಿಗಳ ತಮ್ಮ ದೊಡ್ಡ ಸಂಗ್ರಹವನ್ನು ಅವರು